


ಸ್ವಾರಸ್ಯ, ಸಮಯೋಚಿತ

ದೆಹಲಿಯ ಕೆಂಪುಕೋಟೆ ಕುರಿತ ಹೊನಕೆರೆ ನಂಜುಂಡೇಗೌಡರ ಪರಿಚಯ ಲೇಖನ ಸ್ವಾರಸ್ಯಕರವಾಗಿತ್ತು. 'ಸ್ವಾತಂತ್ರ್ಯ ಯಾರಿಗೆ?' ರಾಘವೇಂದ್ರ ತೊಗರ್ಸಿ ಸಂಗ್ರಹಿಸಿದ ಹಿರಿಯರ ಅಭಿಪ್ರಾಯಗಳು ಸಮಯೋಚಿತವಾಗಿದ್ದವು.

-ಎಸ್.ಚನ್ನಪ್ಪ, ಮೈಸೂರು/ ಎಚ್.ಎನ್.ವಿಶ್ವನಾಥ್, ಸು.ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ದಿನೇಶ್ ಗುಡ್ಡದೂರು, ಚಿಕ್ಕಮಗಳೂರು ಜಿಲ್ಲೆ/ ನಾ.ವೆಂ.ಮುರ್ಳಿ, ನಾಗವಾರ

'ಮಾತೇ ಮುತ್ತು' ಓದಿದ್ರ ಸಾಕರೀ..

'ಸುಧಾ' ತಗೀಯುತಲೆ ನಾ ಮೊದಲ ನೋಡುದ ಅಂದ್ರ 'ಮಾತೇ ಮುತ್ತು.' ಇದರೊಳಗ ಭಾಳ ಅರ್ಥಗರ್ಭಿತ ವಾಕ್ಯ ಇರತಾವು. ಅದನ್ನಷ್ಟ ಓದಿದ್ರ ಇಡೀ 'ಸುಧಾ' ಓದಿದಂಗ ಅನಕೊಂತೀನಿರಿ.

-ಪ್ರಕಾಶ ಹ. ಪಾಟೀಲ, ಖನಗಾಂವ ಬಿ.ಕೆ. (ಬೆಳಗಾವಿ ತಾ.)

ಬಾಲಿಶ ಉತ್ತರ

'ನೀವು ಕೇಳಿದಿರಿ?' ಅಂಕಣದಲ್ಲಿ ವಾಟಾಳ್ ನಾಗರಾಜ್ ಅವರನ್ನು ಮುಂದಿನ ರಾಷ್ಟ್ರಪತಿಯಾಗಿ ಕೂಡಿಸಿದರೆ ಏನಾಗಬಹುದು ಎಂಬ ಮಧುಸೂದನ್ ಪ್ರಶ್ನೆಗೆ ರಾಮ್ ನೀಡಿರುವ ಉತ್ತರ ಬಾಲಿಶವಾಗಿದೆ.

ಇದೀಗ ರಾಷ್ಟ್ರಪತಿಯಾಗಿರುವ ಪ್ರಣವ್ ಮುಖರ್ಜಿ ಒಬ್ಬ ಉತ್ತಮ ಸಂಸದೀಯ ಪಟು. ಹಾಗೆಯೇ ವಾಟಾಳರೂ ಕೂಡ ಒಳ್ಳೆಯ ಸಂಸದೀಯ ಪಟು. ಪ್ರಣವ್ ರಾಷ್ಟ್ರಪತಿಯಾಗಲು ಅರ್ಹರಾಗುವುದಾದರೆ, ವಾಟಾಳ್ ಯಾಕಾಗ ಬಾರದು? ದೇವೇಗೌಡರು, ಯಡಿಯೂರಪ್ಪ ಅವರ ಕುರಿತು ಪ್ರಶ್ನೆಗಳು ಬಂದಾಗಲೂ ರಾಮ್ ಹೀಗೆಯೇ ತಮ್ಮ ಉತ್ತರದಲ್ಲಿ ಸಣ್ಣತನ ತೋರಿದ್ದಾರೆ.

-ರುದ್ರೇಶ್ ಬಿ.ಅದರಂಗಿ, ಕೋಲಾರ

ಜರ್ಮನಿ ಮತ್ತು ಯಕ್ಷಗಾನ

'ಜರ್ಮನಿ ಹುಡುಗಿಯ ಯಕ್ಷ ಸ್ನೇಹ' ನವೀನ್ ಭಟ್‌ರ ಬರಹ ಓದಿ ಖುಷಿಯಾಯ್ತು.

-ಆರ್. ಮಧುಸೂದನ್, ಹಾಸನ/ ತರಂಗಿಣಿ, ತುಮಕೂರು

ಮರುಕಳಿಸಿದ 'ಸುಧಾ' ನೆನಪು

ಹರೀಶ್ ಹಳೆಮನೆಯವರ 'ಎಡಕಲ್ಲು ಗುಡ್ಡದ ಮೇಲೆ...!' ವಯನಾಡಿನ ಒಳ ಹೊರಗಿನ ಚಿತ್ರಣ ಸೊಗಸಾಗಿ ಮೂಡಿ ಬಂದಿದೆ. ಇದನ್ನು ಓದಿದಾಗ ಭಾರತೀಸುತರ ಇದೇ ಹೆಸರಿನ ಕಾದಂಬರಿ 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದ್ದು, ನಂತರ ಸಿನಿಮಾ ಆಗಿದ್ದು ನೆನಪಿಗೆ ಬಂತು.

-ಉಷೆ ಉದಯ್, ಪಡುಬಿದ್ರಿ/ ನೆ.ಲ.ರಾಂ, ಛಾಯಾ ಶ್ಯಾಮಸುಂದರ್, ಬೆಂಗಳೂರು/ ಎಸ್.ನಿತ್ಯ, ಮೂಡಬಿದಿರೆ

ಭಟ್ಟರ ಸಾಹಸಕ್ಕೆ ಮೆಚ್ಚುಗೆ

ಸ್ಥಳೀಯ ಸಂಪನ್ಮೂಲ ಬಳಸಿಕೊಂಡು 'ಕರೆಂಟ್ ಸಾಹಸ' ಪ್ರದರ್ಶಿಸಿದ ಮಾಬ್ಲೇಶ್ವರ ಭಟ್ಟರ ಸಾಹಸ ಮೆಚ್ಚುಗೆಯಾಯ್ತು.

-ರಾಜಶೇಖರ ಗೌಡ, ಕೊಟ್ಟೂರು

ಖರ್ಜೂರ: ಯಾವುದು ಸರಿ?

'ಪೌಷ್ಟಿಕಾಂಶಗಳ ಖಜಾನೆ ಖರ್ಜೂರ!' ಲೇಖನದಲ್ಲಿ ಸುಧಾ ಹೆಗಡೆ ಒಳ್ಳೆಯ ಮಾಹಿತಿ ನೀಡಿದ್ದಾರೆ. ಖರ್ಜೂರ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡುತ್ತದೆ ಎಂದು ಒಂದು ಕಡೆ ಇದೆ. ಆದರೆ ಕಡೆಯ ಪ್ಯಾರದಲ್ಲಿ ಖರ್ಜೂರ ಕೊಲೆಸ್ಟ್ರಾಲ್ ಮಟ್ಟ ಜಾಸ್ತಿ ಇರುವವರಿಗೆ ಒಳ್ಳೆಯದಲ್ಲ ಎಂದಿದೆ. ಯಾವುದು ಸರಿ?

-ಕೆ.ವಿ. ಲಕ್ಷ್ಮೀನಾರಾಯಣ/ ವಿ.ಆರ್. ಕುಸುಮ, ಬೆಂಗಳೂರು/ ಮಾ. ಸದಾಶಿವರಾವ್, ಮಂಗಳೂರು

ಅಧಿಕ ಕೊಲೆಸ್ಟ್ರಾಲ್ ಇರುವವರು ಖರ್ಜೂರ ತಿನ್ನುವುದು ಒಳ್ಳೆಯದಲ್ಲ.

-ಸಂ

ಪತ್ತೇದಾರಿ ಕುತೂಹಲ

ವಿವೇಕಾನಂದ ಕಾಮತ್‌ರ 'ನೆಲ ಮುಗಿಲು' ಪತ್ತೇದಾರಿ ಜಾಡಿನಲ್ಲಿದ್ದು, ಕುತೂಹಲ ಮೂಡಿಸಿದೆ.

-ಎಚ್.ಎನ್.ವಿಶ್ವನಾಥ್, ಶಿವಮೊಗ್ಗ, ವೈ.ಯಂ.ಚಂದ್ರಶೇಖರ್, ಸಿದ್ದಾಪುರ

ಮತ್ತೆ ಅದೇ ನೆನಪು

'ಜಂಬೂಕ' ಧಾರಾವಾಹಿಯಲ್ಲಿ ಅಂಕಿತ ಕಾಡಿನಲ್ಲಿ ತಪ್ಪಿಸಿಕೊಂಡು ಪುನರ್ಜನ್ಮ ಪಡೆದು ವಾಪಸ್ಸು ಬಂದ ಆ ಗುಂಗಿನಲ್ಲೆ ಇದ್ದ ನಮಗೆ 'ನೆಲ ಮುಗಿಲು'ವಿನಲ್ಲಿ ಮತ್ತೆ ಕಾಡಿನ ವಿಷಯ ಬಂದಿದೆ. ಪಾಂಡವ ಬೆಟ್ಟದ ವರ್ಣನೆ



ರೋಮಾಂಚಕಾರಿಯಾಗಿತ್ತು. ಎರಡು ಅಸ್ಥಿಪಂಜರಗಳು ಸಿಕ್ಕಿವೆ ಎಂಬುದನ್ನು ಓದಿ-ಒಟ್ಟಿನಲ್ಲಿ ಕಾಡಿನಿಂದ ಜೀವಂತವಾಗಿ ಬರುವುದು ಒಂದು ಪವಾಡವೆನಿಸುತ್ತದೆ!

-ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು

ಚಡಗ ಕಾದಂಬರಿ ಸ್ಪರ್ಧೆಗೆ ಆಹ್ವಾನ

ಪಾಂಡೇಶ್ವರ ಸೂರ್ಯನಾರಾಯಣ ಚಡಗರ ನೆನಪಿನ ಪ್ರಶಸ್ತಿಗೆ 2011ರಲ್ಲಿ ಪ್ರಕಟವಾದ ಕಾದಂಬರಿಗಳನ್ನು ಆಹ್ವಾನಿಸಲಾಗಿದೆ. ಪ್ರಶಸ್ತಿ ಮೊತ್ತ 10 ಸಾವಿರ ರೂ. ಆಸಕ್ತರು ಕಾದಂಬರಿಯ ಮೂರು ಪ್ರತಿಗಳನ್ನು ಸೆ.15ರ ಒಳಗೆ ಕೆ. ಶಾರದಾ ಭಟ್, 58, ಶಾಂತಾನಂದ ರೆಸಿಡೆನ್ಸಿ, ಮಿಶನ್ ಆಸ್ಪತ್ರೆ ರಸ್ತೆ, ಉಡುಪಿ-576101 ಇಲ್ಲಿಗೆ ಕಳಿಸಬೇಕು. ಹೆಚ್ಚಿನ ಮಾಹಿತಿಗೆ 0820-2535462; 9449233462



ಓಂ ಶ್ರೀ ಸಾಯಿ ಜ್ಯೋತಿಷ್ಯರು



ಶ್ರೀ ಶಿರಡಿ ಸಾಯಿಬಾಬ ಅನುಗ್ರಹದಿಂದ ದೈವಿಕ ಶಕ್ತಿ ಹೊಂದಿದವರು. ಕೇರಳ ಸಮಾಧಿಜಪ ಸರ್ವಮಾಂತ್ರಿಕ ಸಿದ್ಧಿಯನ್ನು ವಶಪಡಿಸಿಕೊಂಡಿರುವ ಮಹಾನ್ ಸಿದ್ಧಿವೇದಮೂರ್ತಿ ಜೋತಿಷ್ಯವಿದ್ವಾನ್ ಕಾಶಿ ಪಂಡಿತ: ಬಾಬುರಾವ್ ಇವರು ಅಘೋರಿ ಮತ್ತು ನಾಗಸಾಧುಗಳ ಜೊತೆ ಕೂಡಿ ಸಂಶೋಧನೆಯನ್ನು ಮಾಡಿ ವಿಚಿತ್ರ ದೈವಶಕ್ತಿ ಆರಾಧಿಸಿ ಮೋಹಿನಿಯನ್ನು ಆಹ್ವಾನಿಸಿಕೊಂಡು 30 ವರ್ಷಗಳಿಂದ ಜೋತಿಷ್ಯ ಶಾಸ್ತ್ರದಲ್ಲಿ ಅಂತರಾಳವನ್ನೂ ನುರಿತಿದ್ದಾರೆ.

ಕೇರಳ, ಬಂಗಾಳಿಶಾಸ್ತ್ರ ಆಧಾರಿತವಾಗಿ ನಿಮ್ಮ ಭವಿಷ್ಯವನ್ನು ನಿಖರವಾಗಿ ಹೇಳುತ್ತಾರೆ. ನಿಮ್ಮ ಯಾವುದೇ ಕಠಿಣ ಸಮಸ್ಯೆಗಳ ಪರಿಹಾರಕ್ಕೆ ಸುವರ್ಣಾವಕಾಶ.

ವ್ಯಾಪಾರದಲ್ಲ ಲಾಭ-ನಷ್ಟ, ಸ್ಥಿರ ಲಕ್ಷ್ಮಿ ಪ್ರಾಪ್ತಿ, ವಿವಾಹ ವಿಚಾರ, ಗಂಡ-ಹೆಂಡತಿಯ ಸಮಸ್ಯೆ, ಅತ್ತೆ-ಸೊಸೆ ಕಾಟ, ಲೈಂಗಿಕ ಸಮಸ್ಯೆ, ಸ್ತ್ರೀ-ಪುರುಷರ ಗುಪ್ತ ಸಮಸ್ಯೆ, ಮಾಟ ಮಂತ್ರ ದೋಷಗಳಿಗೆ ವಿಶೇಷ ಪರಿಹಾರ.



ಕಾಶಿ ಪಂಡಿತ ಬಾಬುರಾವ್

(ಶ್ರೀ ಶಿರಡಿ ಸಾಯಿಬಾಬಾರವರ ಪರಮಭಕ್ತರು)

ಮಲ್ಲೇಶ್ವರಂ ಮತ್ತು ಜಯನಗರ ಬೆಂಗಳೂರು.

ಫೋನ್: 98456 50234 98440 37362